## 1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು-ಮಡಿಕೇರಿ

## ಎಸ್.ಸಿ ಸಂಖ್ಯೆಃ 78/2023

ಪ್ರಾಸಾಃ12
ಚಾಸಾಃ14

ಸಾಕ್ಷಿದಾರರ ಹೆಸರು: ಡಾಃ ಇಂದುಧರ್

ತಂದೆಯ ಹೆಸರು : ಕೀರ್ತಿ ಪ್ರಸಾದ್

ವಯಸ್ಸು : 38 ವರ್ಷ

ವೃತ್ತಿ : ಆಡಳಿತ ವೈದ್ಯಾಧಿಕಾರಿ, ಸಮುದಾಯ ಆರೋಗ್ಯ ಕೇಂದ, ಶನಿವಾರಸಂತೆ

ವಾಸ : ಶನಿವಾರಸಂತೆ.

**ಸಾಕ್ಷಿಯನ್ನು ದಿನಾಂಕ 18-06-2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದ**:

1. ನಾನು 2017 ರಿಂದ ಈವರೆಗೆ ಶನಿವಾರಸಂತೆ ಸಮುದಾಯ ಆರೋಗ್ಯ ಕೇಂದದಲ್ಲಿ ಆಡಳಿತ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿಕೊಂಡು ಬಂದಿರುತ್ತೇನೆ.

2. ದಿನಾಂಕ 18-07-2022 ರಂದು ಮಧ್ಯಾಹ್ನ 12-40 ಗಂಟೆಗೆ ನಮ್ಮ ಆರೋಗ್ಯ ಕೇಂದ್ರಕ್ಕೆ ಚಾಸಾ-1 ರವರು ಅವರಿಗೆ ಅದೇ ದಿನ ಲಕ್ಷ್ಮಿ ಮತ್ತು ಇತರರು ಕೈ ಮತ್ತು ಮರದ ಕೋಲುಗಳಿಂದ ಹಲ್ಲೆ ಮಾಡಿದ ಹಿನ್ನೆಲೆಯಲ್ಲಿ ಚಿಕಿತ್ಸೆಗೆ ಬಂದಿದ್ದು, ನಾನು ಚಾಸಾ-1 ರವರನ್ನು ಪರೀಕ್ಷಿಸಿದಾಗ ಈ ಕೆಳಗಿನ ಗಾಯಗಳು ಕಂಡು ಬಂತು.

1). ಬಲ ಮೊಣಕೈ ಹಿಂಭಾಗ 3.5 ಸೆಂ.ಮೀ X 2 ಸೆಂ.ಮೀ ತರಚಿದ ಕೆಂಪು ಬಣ್ಣದ ಗಾಯ.

2) ಬೆನ್ನಿನ ಬಲಭಾಗದ ಮೇಲೆ ನೋವು.

ನನ್ನ ಅಭಿಪ್ರಾಯದಲ್ಲಿ ಮೇಲೆ ಹೇಳಿದ 1 ಮತ್ತು 2 ನೇ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿರುತ್ತವೆ. ಈ ಬಗ್ಗೆ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ.ಸದರಿ ಗಾಯದ ಪ್ರಮಾಣ ಪತ್ರವನ್ನು ನಾನು ಈಗ ನೋಡುತಿದ್ದು, ಸಾಕ್ಷಿ ಗುರುತಿಸಿದ್ದ ಗಾಯದ ಪ್ರಮಾಣ ಪತ್ರವನ್ನು ನಿಪಿ-18 ಎಂದು, ನಿಪಿ-18 ರಲ್ಲಿ ಸಾಕ್ಷಿ ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು. ಮು,ಮಾ-1 ಮರದ ಕೋಲುವಿನಿಂದ ಹೊಡೆದಲ್ಲಿ ನಿಪಿ-18 ರಲ್ಲಿ ಕಾಣಿಸಿದ ಗಾಯಗಳು ಆಗುವ ಸಾಧ್ಯತೆ ಇರುತ್ತದೆ.

**<u>ಪಾಟೀಸವಾಲು- 6 ಮತ್ತು 7 ನೇ ಆರೋಪಿತರ ಪರವಾಗಿ ಶ್ರೀ ಡಿ.ಡಿ.ಸಿ ವಕೀಲರಿಂದಃ</u>**

3. ಚಾಸಾ-1 ರವರನ್ನು ದಿನಾಂಕ 18-07-2022 ರಂದು ನಮ್ಮ ಸಮುದಾಯ ಆರೋಗ್ಯ ಕೇಂದ್ರಕ್ಕೆ ಯಾರು ಕರೆದುಕೊಂಡು ಬಂದಿದ್ದರು ಎಂದು ನಿಪಿ-18 ರಲ್ಲಿ ನಮೂದು ಮಾಡಿರುವುದಿಲ್ಲ. ನಾನಲ್ಲದೆ ಇತರ ವೈದ್ಯರು ಶನಿವಾರಸಂತೆ ಸಮುದಾಯ ಆರೋಗ್ಯ ಕೇಂದ್ರದಲ್ಲಿ ದಿನಾಂಕ 18-07-2022 ರಂದು ಕರ್ತವ್ಯ ನಿರ್ವಹಿಸುತಿದ್ದರು. ಹಾಗೆ ಕರ್ತವ್ಯ ನಿರ್ವಹಿಸುತಿದ್ದ ವೈದ್ಯರ ಹೆಸರು ಪ್ರಾಣೇಶ್ ಆಗಿರುತ್ತದೆ.

4. ದಿನಾಂಕ 18-07-2022 ರಂದು ಬೆಳಗ್ಗೆ 7.00 ಗಂಟೆಯಿಂದ 9.00 ಗಂಟೆಯ ಒಳಗೆ ಹುಷಾರಿಲ್ಲದ ಹಿನ್ನಲೆಯಲ್ಲಿ ಚಾಸಾ-1 ರವರು ಶನಿವಾರಸಂತೆ ಸಮುದಾಯ ಆರೋಗ್ಯ ಕೇಂದ್ರಕ್ಕೆ ಬಂದು ಚಿಕಿತ್ಸೆ ಪಡೆದ ಬಗ್ಗೆ ರಿಜಿಸ್ಟರ್ ನಲ್ಲಿ ಮಾಹಿತಿ ಇದೆಯಾ ಎಂದರೆ ಸಾಕ್ಷಿ ನನಗೆ ಆ ಬಗ್ಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಯಾವುದೇ ರೋಗಿಯು ಶನಿವಾರಸಂತೆ ಸಮುದಾಯ ಆರೋಗ್ಯ ಕೇಂದ್ರಕ್ಕೆ

ಬಂದು ಚಿಕಿತ್ಸೆಯನ್ನು ಪಡೆದರೆ ಆ ಬಗ್ಗೆ ರಿಜಿಸ್ಟರ್ ನಲ್ಲಿ ನಮೂದು ಆಗುತ್ತದೆ ಎಂದರೆ ಸರಿ. ಹಲ್ಲೆಯ ಹಿನ್ನೆಲೆಯನ್ನು ಚಾಸಾ-1 ರವರೆ ನನ್ನ ಬಳಿ ಹೇಳಿದ್ದರು. ಯಾವುದೇ ವ್ಯಕ್ತಿ ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಬಂದಾಗ MLC intimation ನ್ನು ಸಂಬಂಧಪಟ್ಟ ಪೊಲೀಸ್ ಠಾಣೆಗೆ ಕಳುಹಿಸಬೇಕು ಎಂದು ನನಗೆ ಗೊತ್ತಿರುತ್ತದೆ. ಆ ಬಗ್ಗೆ Medico Legal register ನಲ್ಲಿ ನಮೂದು ಆಗಬೇಕು ಎಂದರೆ ಸರಿ. ದಿನಾಂಕ 18-07-2022 ರಂದು ಚಾಸಾ-1 ರವರು ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಬಂದ ಬಗ್ಗೆ MLC intimation ನ್ನು ನಾನು ಸಂಬಂಧಪಟ್ಟ ಪೊಲೀಸ್ ಠಾಣೆಗೆ ಕಳುಹಿಸಿದ್ದೆ. ಹೊರರೋಗಿಯಾಗಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ಬಂದರೆ ಹೊರರೋಗಿ ಚೀಟಿಯನ್ನು ಮಾಡಿಕೊಳ್ಳಬೇಕು ಎಂದರೆ ಸರಿ. ಆ ಸಂದರ್ಭದಲ್ಲಿ OP slip (ಹೊರರೋಗಿ) ಚೀಟಿ ತಂದ ನಂತರ ನಾವು ರೋಗಿಗೆ ಚಿಕಿತ್ಸೆ ನೀಡುತ್ತೇವೆ ಎಂದರೆ ಸರಿ. ನಿಪಿ-18 ರಲ್ಲಿ ನಾನು ಚಾಸಾ-1 ರವರ out patient number ನ್ನು ನಮೂದು ಮಾಡಿಲ್ಲ.

5. ನಾನು ದಿನಾಂಕ 18-07-2022 ರಂದು ಅಂದಾಜು 10 ನಿಮಿಷಗಳ ಕಾಲ ಚಾಸಾ-1 ರವರ ಗಾಯಗಳ ಪರೀಕ್ಷೆ ಮಾಡಿದ್ದೆ. ಆ ರೀತಿ ನಾನು 10 ನಿಮಿಷಗಳ ಕಾಲ ಪರೀಕ್ಷೆ ಮಾಡಿದ ಬಗ್ಗೆ ನಿಪಿ-18 ರಲ್ಲಿ ನಿರ್ಧಿಷ್ಟವಾಗಿ ನಮೂದು ಇಲ್ಲ ಎಂದರೆ ಸರಿ. ನಿಪಿ-18 ರಲ್ಲಿ ನಾನು ಗಾಯಗಳ ಪ್ರಾಯವನ್ನು ನಮೂದಿಸಿಲ್ಲ.

6. ದಿನಾಂಕ 18-07-2022 ರಂದು ಮಧ್ಯಾಹ್ನ 12.40 ಗಂಟೆಗೆ ಚಾಸಾ-1 ರವರು ಶನಿವಾರಸಂತೆ ಸಮುದಾಯ ಆರೋಗ್ಯ ಕೇಂದ್ರಕ್ಕೆ ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಬಂದಿರಲಿಲ್ಲ ಎಂದರೆ ಸರಿಯಲ್ಲ. ನಡೆದುಕೊಂಡು ಹೋಗುವಾಗ ಒರಟಾದ ಗೋಡೆಗೆ ಮೊಣಕೈ ಉಜ್ಜಿ ಹೋದಲ್ಲಿ ನಿಪಿ-18 ರಲ್ಲಿ ಕಾಣಿಸಿದ 1 ನೇ ಗಾಯ ಆಗುವ ಸಾಧ್ಯತೆ ಇದೆ ಎಂದರೆ ಸರಿ. ಆ ರೀತಿ ಒರಾಟದ

ಗೋಡೆಗೆ ಮೊಣಕೈ ಉಜ್ಜಿ ಹೋಗುವ ಸಂದರ್ಭ ಆಯಾತಪ್ಪಿ ಬಿದ್ದಲ್ಲಿ ನಿಪಿ-18 ರಲ್ಲಿ ಕಾಣಿಸಿದ 2 ನೇ ಗಾಯ ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ದಿನಾಂಕ 18-07-2022 ರಂದು ಪೊಲೀಸರು ಶನಿವಾರಸಂತೆ ಸಮುದಾಯ ಆರೋಗ್ಯ ಕೇಂದ್ರಕ್ಕೆ ಬಂದ ಬಗ್ಗೆ ಅಥವಾ ಅಲ್ಲಿ ಚಾಸಾ-1 ರವರು ಪೊಲೀಸರಿಗೆ ಹೇಳಿಕೆ ಕೊಟ್ಟ ಬಗ್ಗೆ ನನಗೆ ಮಾಹಿತಿ ಇಲ್ಲ. ದಿನಾಂಕ 18-07-2022 ರಂದು ಶನಿವಾರಸಂತೆ ಪೊಲೀಸರು ಶನಿವಾರಸಂತೆ ಸಮುದಾಯ ಆರೋಗ್ಯ ಕೇಂದ್ರಕ್ಕೆ ಬಂದು MLC intimation ನ್ನು ತೆಗೆದುಕೊಂಡು ಹೋಗಿರಲಿಲ್ಲ. ನಾನು MLC intimation ಲಿಖಿತವಾಗಿ ತಯಾರಿಸಿ ಸಿಬ್ಬಂದಿಗಳ ಮೂಲಕ ಅದನ್ನು ಶನಿವಾರಸಂತೆ ಪೊಲೀಸ್ ಠಾಣೆಗೆ ಕಳುಹಿಸಿಕೊಟ್ಟಿದ್ದೆ.

**<u>ಪಾಟೀಸವಾಲು- 5 ನೇ ಆರೋಪಿ ಪರ ಶ್ರೀ ಪಿ.ಕೆ.ಎಂ. ವಕೀಲರಿಂದಃ</u>**

7. ಸಾಮಾನ್ಯವಾಗಿ ಒಬ್ಬ ವ್ಯಕ್ತಿಗೆ 40 ವರ್ಷದ ನಂತರ ಎಲುಬಿನ ಸಾಂದ್ರತೆ ಕಡಿಮೆ ಆಗುತ್ತಾ ಹೋಗುತ್ತದೆ ಎಂದರೆ ಸರಿ. ಮಹಿಳೆಗೆ ಆ ರೀತಿಯ ಎಲುಬಿನ ಸಾಂದ್ರತೆ ತೀವ್ರವಾಗಿ ಕಡಿಮೆ ಆಗುತ್ತಾ ಹೋಗುತ್ತದೆ ಎಂದರೆ ಸರಿ. ಚಾಸಾ-1 ರವರಿಗೆ ನನ್ನಲ್ಲಿ ಚಿಕಿತ್ಸೆಗೆ ಬಂದಾಗ 54 ವರ್ಷ ಆಗಿತ್ತು. 54 ವರ್ಷದ ಒಬ್ಬ ಮಹಿಳೆಗೆ ಮುದ್ದೆಮಾಲು-1 ರಂತಹ ಮರದ ಕೋಲುವಿನಿಂದ ಹೊಡೆದಲ್ಲಿ ಮೂಳೆ ಮುರಿತ ಆಗುತಿತ್ತು ಎಂದರೆ ಸಾಕ್ಷಿ ಹೊಡೆತದ ತೀವ್ರತೆಯ ಮೇಲೆ ಅದು ಅವಲಂಬಿಸಿದೆ ಎನ್ನುತ್ತಾರೆ. ಗಾಯದ ಪ್ರಮಾಣವನ್ನು ನಮೂದಿಸುವಾಗ ಅದರ ಉದ್ದ-ಅಗಲವು horizontal ಇದೆಯೋ ಅಥವಾ vertical ಇದೆಯೋ ಎಂದು ನಮೂದಿಸಿಲ್ಲ ಎಂದರೆ ಸರಿ. 2 ನೇ ಗಾಯದಲ್ಲಿ ನಮೂದಿಸಿದ scapular ಎಂದರೆ ಭುಜಕ್ಕೆ ಹೊಂದಿಕೊಂಡಿರುವ ಬೆನ್ನಿನಲ್ಲಿ ಇರುವ ಮೂಳೆ ಎಂದರೆ ಸರಿ. ನಾನು 2 ನೇ ಗಾಯವನ್ನು ಮುಟ್ಟಿ ಪರೀಕ್ಷೆ ಮಾಡಿರುತ್ತೇನೆ. scapular ಮೂಳೆಯಲ್ಲಿ ನೋವು ಇದೆ ಎಂದಾಗ ಚಾಸಾ-1 ರವರನ್ನು ಕ್ಷ-ಕಿರಣ ಪರೀಕ್ಷೆಗೆ ಒಳಪಡಿಸಲು ನಾನು ಸಲಹೆ ನೀಡಿರುವುದಿಲ್ಲ. ಶನಿವಾರಸಂತೆ ಸಮುದಾಯ

ಆರೋಗ್ಯ ಕೇಂದ್ರದಲ್ಲಿ ಕ್ಷ-ಕಿರಣ ಸೌಲಭ್ಯ ಇರುವುದಿಲ್ಲ. Injury ಗೂ, pain ಗೂ ವ್ಯತ್ಯಾಸ ಇರುತ್ತದೆ ಎಂದರೆ ಸರಿ. ಪರೀಕ್ಷೆ ಮಾಡುವ ವ್ಯಕ್ತಿಗೆ injury ಕಣ್ಣಿಗೆ ಕಾಣುತ್ತದೆ ಆದರೆ pain ಕಣ್ಣಿಗೆ ಕಾಣುವುದಿಲ್ಲ ಎಂದರೆ ಸರಿ. ನಿಪಿ-18 ರಲ್ಲಿ ನಮೂದಿಸಿದ 2 ನೇ ಗಾಯ injury ಯೋ ಅಥವಾ pain ನೋ ಎಂದರೆ ಸಾಕ್ಷಿ pain ಎನ್ನುತ್ತಾರೆ. ಒಬ್ಬ ವ್ಯಕ್ತಿ ನೋವು ಇದೆ ಎಂದು ಸುಳ್ಳು ಹೇಳುವ ಸಾಧ್ಯತೆ ಇರುತ್ತದೆ.

8. ನಿಪಿ-18 ರಲ್ಲಿ ನಮೂದಿಸಿದ ನೋವು ಗಾಯವಲ್ಲದಿದ್ದರೂ ನಾನು ಅದನ್ನು ಗಾಯವೆಂದು ಸುಳ್ಳು ಅಭಿಪ್ರಾಯವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಪೊಲೀಸರ ಕೋರಿಕೆಯ ಮೇರೆಗೆ ಈ ಪ್ರಕರಣಕ್ಕೆ ಅನುಕೂಲವಾಗುವಂತೆ ನಿಪಿ-18 ನ್ನು ಸೃಷ್ಟಿಸಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಶನಿವಾರಸಂತೆ ಪೊಲೀಸರು ಕೋರಿಕೆಯ ಮೇರೆಗೆ ಈ ದಿನ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು- 1 ರಿಂದ 4 ನೇ ಆರೋಪಿತರ ವಕೀಲರು ಈ ಮೇಲಿನ ಶ್ರೀ ಡಿ.ಡಿ.ಸಿ ಮತ್ತು ಶ್ರೀ.ಪಿ.ಕೆ.ಎಂ ವಕೀಲರುಗಳು ಮಾಡಿದ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.**

**ಮರುವಿಚಾರಣೆಃ** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ